ಇದು 7–8 ತಿಂಗಳಾಯಿತು. ಬೇಗ ಕೊಟ್ಟು ಕೆಲಸವನ್ನು ಪ್ರಾರಂಭ ಮಾಡಬೇಕು.

ಅಧ್ಯಕ್ಷರು: ಆಯಿತು.

ನಿಯಮ–69ರ ಮೇರೆಗೆ ಸಾರ್ವಜನಿಕ ಮಹತ್ವದ ಚರ್ಚೆ

(1) ವಿಷಯ: ಮಹಾನಗರ ಪಾಲಿಕೆಯಲ್ಲಿ ಜವಹರಲಾಲ್ ನೆಹರು ರಿನಿವಲ್ ಮೆಷಿನ್‌ದಲ್ಲಿ ಅವ್ಯವಹಾರವಾಗಿರುವ ಬಗ್ಗೆ.

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಹಾನಗರ ಪಾಲಿಕೆಯಲ್ಲಿ ಜವಾಹರಲಾಲ್ ನೆಹರು ರಿನಿವಲ್ ಮೆಷಿನ್‌ದಲ್ಲಿ ಏನು ಹಣ ಬಂದಿದೆ, ಅದರಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. ಮೊನ್ನೆ ಮಾನ್ಯ ಪ್ರಧಾನ ಮಂತ್ರಿಗಳು ಕರ್ನಾಟಕದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಮಂತ್ರಿಗಳ ಜೊತೆಯಲ್ಲಿ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಜವಾಹರಲಾಲ್ ನೆಹರು ರಿನಿವಲ್ ಮೆಷಿನ್‌ದಲ್ಲಿ ಕೆಲಸ ನಡೆಯುತ್ತಿಲ್ಲ. ಮೈಸೂರಿಗೆ 12000 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಇದನ್ನು ಮಾಡಬೇಕಾದರೆ ಚುನಾಯಿತ ಪ್ರತಿನಿಧಿಗಳು ಇಲ್ಲ ಎನ್ನತಕ್ಕಂಥದು ಒಂದು ವಾದ. ಮತ್ತೊಂದು ಕಡೆ ಏನೆಂದರೆ, storm water drain clean ಮಾಡತಕ್ಕಂಥದ್ದರಲ್ಲಿ ಸಮಿತಿಯ ಒಂದು ವರದಿ ಕೂಡ ಬಂದಿದೆ. ಸಾಕಷ್ಟು ಮಹಾನಗರ ಪಾಲಿಕೆಯಲ್ಲಿ 64 ಕೋಟಿ ರೂ.ಗಳ ಒಂದು ಅವ್ಯವಹಾರವಾಗಿದೆ. ಅದರ ಬಗ್ಗೆ ನಾನು ಮತ್ತು ಡಿ.ಕೆ.ಶಿವಕುಮಾರ್‌ರವರು ಮಾತನಾಡುತ್ತೇವೆ. ಇದರ ಬಗ್ಗೆ ಚರ್ಚೆಯಾಗಬೇಕು.

ಅಧ್ಯಕ್ಷರು: ಇದರಲ್ಲಿ 643 ಕೋಟಿ ರೂ.ಗಳು ಆ ವೆಚ್ಚದಲ್ಲಿ ಎಂದು ಬರೆದಿರುತ್ತೀರಿ.

ಶ್ರೀ ಧರ್ಮಸಿಂಗ್: ಅಲ್ಲಾ. ಅದಕ್ಕಾಗಿ ಈ ವಿಷಯವನ್ನು ಎತ್ತಿದ್ದೇವೆ. ಡಿ.ಕೆ.ಶಿವಕುಮಾರ್‌ವರು ಮಾತನಾಡುತ್ತಾರೆ, ಸಾಕಷ್ಟು ನಮ್ಮಲ್ಲಿ materials ಇವೆ he is very expert of that matter ಅದಕ್ಕಾಗಿ ಅವರಿಗೆ ಚರ್ಚೆ ಮಾಡಲಿಕ್ಕೆ ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಇದಕ್ಕೆ ಡಿ.ಕೆ.ಶಿವಕುಮಾರ್‌ವರು ಸಹಿ ಹಾಕಿದ್ದಾರಾ?

ಶ್ರೀ ಧರ್ಮಸಿಂಗ್: ಅವರು ಸಹಿ ಹಾಕಿದ್ದಾರೆ.

ಅಧ್ಯಕ್ಷರು: ಸಿಗ್ನೇಟರಿ ಇದ್ದರೆ ತಾವು ಮಾತನಾಡಿ.

ಶ್ರೀ ಡಿ.ಕೆ.ಶಿವಕುಮಾರ್ (ಸಾತನೂರು): ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ವಿಶೇಷವಾದಂಥ ಹಗರಣ. ನಾನು ಇದನ್ನು ಮುಖ್ಯಮಂತ್ರಿಯ ಮೇಲೆ ಹಗರಣದ ಆರೋಪ ಹೊರಿಸುತ್ತಿಲ್ಲ.

ಅಧ್ಯಕ್ಷರು: ಹಗರಣ ಎಂದ ಮೇಲೆ ವಿಶೇಷವೇ.

ಶ್ರೀ ಡಿ.ಕೆ.ಶಿವಕುಮಾರ್: ಮುಖ್ಯಮಂತ್ರಿಯವರು ಮಾಡಿದ್ದಾರೆಂದು ಆಗಲಿ ನಾನು ಆರೋಪ ಮಾಡುತ್ತಿಲ್ಲ ಗಾಬರಿ ಮಾಡುವುದಕ್ಕೆ ಹೋಗಬೇಡಿ. ಇದೊಂದು ಪ್ರಧಾನ ಮಂತ್ರಿಗಳ ಅಚ್ಚುಮೆಚ್ಚಿನ ಕಾರ್ಯಕ್ರಮ. ಅವರು ಇದನ್ನು ನಗರ ಪ್ರದೇಶದ ಜನಸಂಖ್ಯೆ ನೋಡಿ, ಭಾರತದಲ್ಲಿ 36% ಆಗಿದೆ. ಇದಕ್ಕೆ ಏನಾದರೂ ಮಾಡಬೇಕೆಂದು ನಗರ ಪ್ರದೇಶಗಳಿಗೆ ಹೆಚ್ಚಿನ ಒಂದು ಒತ್ತನ್ನು ಕೊಡಬೇಕೆಂದು ಹೇಳಿ, ಬಾಂಬೆ ಮತ್ತು ಬೆಂಗಳೂರಿನಲ್ಲಿ ನೀರಿನ ಒತ್ತಡ ಜಾಸ್ತಿಯಾಯಿತು ಎಂದು ಹೇಳಿ ನಗರ ಪ್ರದೇಶದಲ್ಲಿ ಹೆಚ್ಚಿನ infrastructure ಅನ್ನು ಮಾಡಬೇಕೆಂದು ಹೇಳಿ ಜವಾಹರಲಾಲ್ ನೆಹರು ಅವರ ಹೆಸರಿನಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ. ಏಕೆ ಜವಾಹರಲಾಲ್ ನೆಹರುರವರ ಹೆಸರನ್ನು ಮನಮೋಹನ್‌ಸಿಂಗ್‌ರವರು ಆಯ್ಕೆ ಮಾಡಿದರು ಎಂದರೆ, ಕೇಂದ್ರ ಸರ್ಕಾರ ಜವಾಹರಲಾಲ್ ನೆಹರು ಅವರು 1924 ರಲ್ಲಿ ಈ ರಾಷ್ಟ್ರದ ಪ್ರಧಾನ ಮಂತ್ರಿಯಾಗಿರತಕ್ಕಂಥ ವ್ಯಕ್ತಿ ಕಾಲಾಭಾಗದ ಮುನ್ಸಿಪಲ್ ಅಧ್ಯಕ್ಷರಾಗಿದ್ದರು. ಅವರು ಅದಾದ ಮೇಲೆ ಅಲಹಾಬಾದ್‌ನ ಅಧ್ಯಕ್ಷರಾಗಿದ್ದುಕೊಂಡು ಅದರ ಜೊತೆಗೆ Chief Executive Officer ಆಗಿ ಕೆಲಸವನ್ನು ಮಾಡಿದರು. ಅವರು ನಗರಗಳಿಗೆ ಕೊಟ್ಟಿರತಕ್ಕಂಥ ಒತ್ತಿನ ಹಿನ್ನಲೆಯಲ್ಲಿ ಜವಾಹರಲಾಲ್ ನೆಹರು ಮೆಷಿನ್ ಎಂದು ಹೇಳಿ ಈ ಕಾರ್ಯಕ್ರಮವನ್ನು ಮನಮೋಹನ್‌ಸಿಂಗ್‌ರವರು ರೂಪಿಸಿದರು. ನಮ್ಮ ರಾಜೀವ್ ಗಾಂಧಿಯವರು 74ನೇ ತಿದ್ದುಪಡಿಯನ್ನು ತಂದು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಶಕ್ತಿಯನ್ನು ಕೊಡಬೇಕು, ಹೆಚ್ಚಿಗೆ ಅಧಿಕಾರವನ್ನು ಕೊಡಬೇಕು. ಇಂತಹ ಕಾರ್ಯಕ್ರಮವನ್ನು ಮಾಡಬೇಕಾದರೆ ಸ್ಥಳೀಯ

ಸಂಸ್ಥೆಗಳು ಅಧಿಕಾರದಲ್ಲಿ ಇರಬೇಕು ಎನ್ನುವ ಒಂದು ಒತ್ತನ್ನು ಅವರು ತಂದರು. ಈ ಒಂದು ಕಾರ್ಯಕ್ರಮಕ್ಕೆ agreement ಮಾಡುವ ಸಂದರ್ಭದಲ್ಲಿ ಕೂಡ ಈ ಕಾರ್ಯಕ್ರಮವನ್ನು ಮಾಡುವ ಸಂದರ್ಭದಲ್ಲಿಯೂ ಕೂಡ, ಈ ಕಾರ್ಯಕ್ರಮ ಯಾವ ರೀತಿ ಎಂದರೆ, Central Government 50%, State Government 35% ಮತ್ತು 15% ಸ್ಥಳೀಯ ಸಂಸ್ಥೆಗಳಿಗೆ ಸೇರಿದಂಥ ಒಂದು ವಿಚಾರ. 14.6.2007 ರಂದು.....

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಹತ್ವವಾದ ಒಂದು ಚರ್ಚೆ ನಡೆಯುತ್ತಿದೆ. ಯಾರೂ ಮೊದಲಿನ ಸಾಲಿನ ಮಂತ್ರಿಗಳು ಇಲ್ಲ. ಕೊನೆಗೆ ಮಾನ್ಯ ಅಶೋಕ್‌ರವರನ್ನು ಕಳುಹಿಸಿ. ಇಲ್ಲದಿದ್ದಕೆ ನಡೆಸಬೇಡಿ. ಇಲ್ಲದಿದ್ದರೆ ನಾಳೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ಕರೆಸುತ್ತೇನೆ.

ಶ್ರೀ ಧರ್ಮಸಿಂಗ್: ಏನು ಕರೆಸುತ್ತೀರಿ, ಯಾರಿಗೆ ಹೇಳಬೇಕು.

ಅಧ್ಯಕ್ಷರು: ಇನ್ನು ಬೇಕಾದಷ್ಟು ಇದೆ, ಕರೆಸುತ್ತೇನೆ.

ಶ್ರೀ ಧರ್ಮಸಿಂಗ್: ಬೇಕಾದಷ್ಟು ಇದೆ ಎಂದು ಸುಮ್ಮನೆ ಮಾತನಾಡುವುದಾ?

ಅಧ್ಯಕ್ಷರು: ಕರೆಸುತ್ತೇನೆ.

ಶ್ರೀ ಧರ್ಮಸಿಂಗ್: ಯಾರು ಒಬ್ಬರಾದರೂ ಇದ್ದಾರಾ ಕೇಳಿ?

ಅಧ್ಯಕ್ಷರು: ರೀ ಮಂತ್ರಿಗಳೇ, ಯಾರಾದರೂ ನಿಮ್ಮ ಮುಂದಿನ ಸಾಲಿನ ಮಂತ್ರಿಗಳು ಇರಬೇಕು. ಯಾರು ಇರುವುದಿಲ್ಲ, ನೀವು ಬೈಯ್ಯಿಸಿಕೊಳ್ಳುವುದು.

ಶ್ರೀ ಧರ್ಮಸಿಂಗ್: ನಾಗರಾಜ ಶೆಟ್ಟಿಯವರೆ, ನೀವಾದರೂ ಮುಂದೆ ಬಂದು ಕುಳಿತುಕೊಳ್ಳಿ.

ಅಧ್ಯಕ್ಷರು: ವಿರೋಧ ಪಕ್ಷದವರು ನಿಮಗೆ ಯಾವಾಗಲೂ ಬೈಯ್ಯುತ್ತಿದ್ದರೆ ಅಷ್ಟೆ, ಒಂದು ತರಹ ಸುಖ ಪಡುತ್ತೀರಿ.

ಶ್ರೀ ಧರ್ಮಸಿಂಗ್: ನಾಳೆ ಮಾಡಿ. ಏನೂ ಆಗುವುದಿಲ್ಲ, ಇದು important ಇದೆ.

ಅಧ್ಯಕ್ಷರು: ಯಾರನ್ನಾದರೂ ಕರೆಯಿರಿ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಇದನ್ನು ಪ್ರೆಸ್‌ನಲ್ಲಿ ಒಂದು ಕಡೆ, ಹಗರಣಗಳ ರಾಜ ಎಂದು ಒಂದು ದೊಡ್ಡ ಮಾಧ್ಯಮದಲ್ಲಿ ಬರೆಯುತ್ತಾರೆ. ಇದಕ್ಕೆ ಯಾರು ಉತ್ತರ ಕೊಡುತ್ತಾರೋ ನನಗಂತ್ತು ಗೊತ್ತಿಲ್ಲ. ಇದಕ್ಕೆ ತಾವು ಅವರನ್ನು ಕರೆಯಿಸಬೇಕು. ಏಕೆಂದರೆ ಈಗ ಹೊಸದಾಗಿ Corporation Commissioner ಆಗಿ ಶ್ರೀ ಸುಬ್ರಮಣ್ಯ ಅವರು ಹೋಗಿದ್ದಾರೆ. ಅವರು ಮಾಡಿದರು ಎಂದು ಹೇಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಧರ್ಮಸಿಂಗ್: ಈಗ ತಾವು ಹೋದರೆ ಹೇಗೆ? ನಾಳೆ ತೆಗೆದುಕೊಳ್ಳಿ, ಏಕೆ ಹೀಗೆ?

ಶ್ರೀ ಡಿ.ಕೆ.ಶಿವಕುಮಾರ್: ಇದು Central Government ಹಣ.

ಶ್ರೀ ಧರ್ಮಸಿಂಗ್: ನೀವು ಇದನ್ನು ಅಜೆಂಡಾದಲ್ಲಿ ಹಾಕಿರುತ್ತೀರಿ. Principal Secretary Urban Development ಎಲ್ಲಿದ್ದಾರೆ.? ಇಲ್ಲಿ ಹೇಳುವವರು ಯಾರು? ಕೇಳುವವರು ಯಾರು? ಸ್ವಾಮಿ. ಇದನ್ನು ಯಾರಿಗೆ ಹೇಳಬೇಕು.

ಅಧ್ಯಕ್ಷರು: ಮಂತ್ರಿಗಳು ಬರುತ್ತಾರೆ ಸರ್.

ಶ್ರೀ ಡಿ.ಕೆ.ಶಿವಕುಮಾರ್: ಇಲ್ಲಿ Urban Development Department ದವರು ಇರಬೇಕು.

ಶ್ರೀ ಧರ್ಮಸಿಂಗ್: ಒಬ್ಬರು ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಜವಾಬ್ದಾರಿ ಇರುವವರು ಇರಬೇಕು.

ಅಧ್ಯಕ್ಷರು: ನಾನು ದಯಮಾಡಿ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾನು ಹೇಳಿದ್ದೇನೆ ಮಂತ್ರಿಗಳು ಬರುತ್ತಾರೆ. ಇದರ ಬಗ್ಗೆ ಶಿವಕುಮಾರ್‌ವರು ಮಾತನಾಡಲಿ.

ಶ್ರೀ ಡಿ.ಕೆ.ಶಿವಕುಮಾರ್: ಇದನ್ನು ಕಾಟಾಚಾರಕ್ಕೆ ಮಾತನಾಡುವುದು ಅಲ್ಲಾ ಸ್ವಾಮಿ. ಕೇಳಿ ಸರ್.

ಅಧ್ಯಕ್ಷರು: ನಿಮ್ಮ ಧ್ವನಿ ದೊಡ್ಡದಾಗಿ ಇದೆ. ಅದು ನನಗೆ ಕೇಳಿಸಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಗರಣವು ದೊಡ್ಡದಾಗಿ ಇದೆ.

(ಗೊಂದಲ)

ಅಧ್ಯಕ್ಷರು:– ಈಗ ಬೇರೆ ಬೇರೆ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ, ಆದುದರಿಂದ ಇವತ್ತು ಮುಗಿಸಿ. ಸಂಬಂಧಪಟ್ಟ ಸಚಿವರನ್ನು ಕರೆಸುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್:– ಅಧ್ಯಕ್ಷರೆ, ಇದು ಮಹತ್ವವಾದ ವಿಚಾರ.,

ಅಧ್ಯಕ್ಷರು:– ನಿಯಮ 69ಅನ್ನು ನಾಳೆ ತೆಗೆದುಕೊಳ್ಳೋಣ ಅಂದರೆ ಈಗ ಅರ್ಧಗಂಟೆ ಕಾಲದ ಚರ್ಚೆಯನ್ನು ಮುಗಿಸಬೇಕು, ಏಕೆಂದರೆ ನಾಳೆಯೂ ಕೂಡ ಬಹಳಷ್ಟು ವಿಷಯಗಳಿವೆ.

ಶ್ರೀ ಡಿ.ಕೆ.ಶಿವಕುಮಾರ್:– ನಾಳೆ first hourನಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆಕೊಳ್ಳೋಣ.

ಅಧ್ಯಕ್ಷರು:– ನಾಳೆ first hourನಲ್ಲಿ ಹೈದರಾಬಾದ್ ಕರ್ನಾಟಕ ವಿಷಯಕ್ಕೆ ಉತ್ತರ.

ಶ್ರೀ ಎನ್.ಧರ್ಮಸಿಂಗ್:– ನಾಳೆ ಬೆಳಿಗ್ಗೆ ನಂಜುಮಡಪ್ಪ ವರದಿಯ ಬಗ್ಗೆ ಉತ್ತರ ಆದ ಮೇಲೆ ಈ ವಿಷಯ ಚರ್ಚೆಯಾಗಲಿ.

ಅಧ್ಯಕ್ಷರು:– ಆಯಿತು, ಈಗ ಅರ್ಧ ಗಂಟೆ ಕಾಲಾವದಿ ಚರ್ಚೆ ತೆಗೆದುಕೊಳ್ಳೋಣವೇ?..ನಾಳೆ ಮಾಡಲಿಕ್ಕಾಗುವುದಿಲ್ಲ. ಹಾಗಾದರೆ ನಿಮ್ಮದು ನಿಯಮ 69 ಇಲ್ಲ, ಯಾವುದೂ ಇಲ್ಲ. ಹಾಗಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಈಗಾಗಲೇ ರಾತ್ರಿ 7.00 ಗಂಟೆ ಆಗುತ್ತಿದೆ, ನಾಳೆ ಚರ್ಚೆ ಮಾಡಬಹುದು.

ಅಧ್ಯಕ್ಷರು:– ಈಗ ಮುಂದಿನ ಸಾಲಿನವರು ಇಲ್ಲವೆಂದರೆ ಹಿಂದಿನ ಸಾಲಿನವರು ಇರುತ್ತಾರೆ. ನೀವು ಸುಮ್ಮನೆ ಈ ರೀತಿ ಮಾತನಾಡಬಾರದು.

ಶ್ರೀ ಎಂ.ಪಿ. ವೆಂಕಟೇಶ್: ನಾಳೆ ಡಿ.ಕೆ.ಶಿವಕುಮಾರ್‌ರವರು ಮಾತನಾಡುವಾಗ ಮುಖ್ಯಮಂತ್ರಿಗಳಿರಬೇಕು.